

ಚಕಚಕನೆ ಜಲವರ್ಣ ಚಿತ್ರಗಳನ್ನು ಬಿಡಿಸುವ ಈ ಕಲಾವಿದ ಪ್ರಶಸ್ತಿ, ಪ್ರಚಾರಗಳಿಗೆ ಮುಗಿಬಿದ್ದವರಲ್ಲ.

■ ದಿನೇಶ್ ಹೊಳ್ಳ

# ಜಲವರ್ಣದ ಮಾಂತ್ರಿಕ



ಸಯ್ಯದ್ ಅಸಿಫ್ ಅಲಿ

ಮೇಘ ರಾಶಿಗಳಿಂದ ಶಿಖರಗಳಿಗೆ ಚುಂಬನ, ಇಳೆಗೆ ಇಬ್ಬನಿಯಿಂದ ಆಲಿಂಗನ, ಶರಧಿಯ ಅಲೆಗಳು ಜಿಗಿದು ಪುಟಿಯುವ ಜಲಸಿಂಚನ. ಸೂರ್ಯಾಸ್ತಮಾನ ದೃಶ್ಯಗಳ ವಿಹಂಗಮ ಆವರ್ತನ– ನಿಸರ್ಗದ ಸಹಜ ಸೌಂದರ್ಯದ ಪುಟಗಳ ಇಂತಹ ದೃಶ್ಯಗಳು ಕಾವ್ಯ ಶಬ್ದಗಳಾಗಿ, ಬಣ್ಣದ ಚಿತ್ತಾರಗಳಾಗಿ ಅಭಿವ್ಯಕ್ತಿಪಡಿಸುವುದಕ್ಕೆ ಸೃಜನಶೀಲ ಮನಸ್ಸು ಬೇಕು. ಶಬ್ದಗಳಲ್ಲಿ ಇವುಗಳನ್ನು ಪೋಣಿಸಿದಾಗ ಅಮರ ಕವಿತೆಯಾಗುತ್ತದೆ. ಕುಂಚ ಬಣ್ಣಗಳಲ್ಲಿ ಪೋಣಿಸಿದಾಗ ಕಣ್ಮನ ಸೆಳೆಯುವ ಸುಂದರ ಕಲಾಕೃತಿಯಾಗುತ್ತದೆ.

ಇಂತಹ ನಿಸರ್ಗ ದೃಶ್ಯಗಳನ್ನೇ ಚಿತ್ರಿಸುವಲ್ಲಿ ವಿಶೇಷ ಪರಿಣತಿ ಪಡೆದಿರುವವರು ಕಲಾವಿದ ಸಯ್ಯದ್ ಅಸಿಫ್ ಅಲಿ. ಚಿತ್ರದುರ್ಗದ ಮೊಳಕಾಲ್ಮೂರಿನವರಾದ ಇವರು ಮಂಗಳೂರಿನ ಮಹಾಲಸ ಚಿತ್ರಕಲಾ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ವಿದ್ಯಾರ್ಥಿಗಳನ್ನು ಆಗಾಗ ಹಂಪಿ, ಬೇಲೂರು, ಚಿತ್ರದುರ್ಗ, ಶ್ರವಣಬೆಳಗೊಳದಂತಹ ನಿಸರ್ಗ ತಾಣಗಳಿಗೆ ಕರೆದೊಯ್ದು ಸ್ಥಳದಲ್ಲೇ ಚಿತ್ರ ರಚನೆಯ ತರಬೇತಿ ಕೊಟ್ಟು ತನ್ನ ಕಲಾ ಚಾತುರ್ಯವನ್ನು ಶಿಷ್ಯವರ್ಗಕ್ಕೂ ಧಾರೆ ಎರೆಯುತ್ತಿದ್ದಾರೆ. ವಿರಳ ಮಾತಿನ, ಸರಳ ವ್ಯಕ್ತಿತ್ವದ ಸಜ್ಜನರಾದ ಇವರ ಕಲಾಪ್ರತಿಭೆಗೆ ಕಳೆದ ವರ್ಷ ಲಲಿತಕಲಾ ಅಕಾಡೆಮಿಯ ರಾಜ್ಯಪ್ರಶಸ್ತಿ ಲಭಿಸಿದೆ.

ಇವರು ಕಡಿಮೆ ಅವಧಿಯಲ್ಲಿ ಚಕಚಕನೆ ಎದುರಿಗಿದ್ದ ದೃಶ್ಯ ಅಥವಾ ವ್ಯಕ್ತಿಯನ್ನು ಬಿಡಿಸುವ ಅದ್ಭುತ ಚಮತ್ಕಾರವನ್ನು ಗಳಿಸಿಕೊಂಡಿದ್ದು ಪ್ರಚಾರ, ಪ್ರಶಸ್ತಿ, ಪುರಸ್ಕಾರಗಳನ್ನು ಎಂದಿಗೂ ಬಯಸುವವರಲ್ಲ, ಡಿಪ್ಲೊಮಾ ಇನ್ ಫೈನ್ಆರ್ಟ್ಸ್, ಮಾಸ್ಟರ್ ಆಫ್ ವಿಝುವಲ್ ಆರ್ಟ್ಸ್‌ನ ಪದವಿ ಪಡೆದಿರುವ ಇವರು 1993, 94, 95ರಲ್ಲಿ ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಸ್ಕಾಲರ್‌ಶಿಪ್ ಪಡೆದಿದ್ದಾರೆ. ಹರಿಯಾಣದಲ್ಲಿ ನಡೆದ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನ, ಮೈಸೂರಿನ ದಸರಾ ಚಿತ್ರ ಕಲಾ ಪ್ರದರ್ಶನ, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಚಿತ್ರಕಲಾ

(8ನೇ ಪುಟ ನೋಡಿ)

ವಿನ್ಯಾಸ: ದಿಲ್